## ಪರ್ಯಾಯ ಶೈಕ್ಷಣಿಕ ಯೋಜನೆ 2021–22

ತರಗತಿ:7 ವಿಷಯ:ವಿಜ್ಞಾನ ತಿಂಗಳು: ನವೆಂಬರ್–2021

| ಕ್ರಮ ಸಂಖ್ಯೆ | ತಿಂಗಳು ಮತ್ತು ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕೆಯ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1. | ನವೆಂಬರ್ ಮೊದಲನೇ ವಾರ<br>ಘಟಕ: ಮಾರುತಗಳು, ಬಿರುಗಾಳಿ ಮತ್ತು ಚಂಡಮಾರುತಗಳು | ಗಾಳಿಯು ಒತ್ತಡವನ್ನುಂಟು ಮಾಡುತ್ತದೆ ಎಂಬುದನ್ನು ಪ್ರಾಯೋಗಿಕವಾಗಿ ತಿಳಿಯುವರು. | ಈ ಕೆಳಗೆ ನೀಡಿರುವ ಚಟುವಟಿಕೆಗಳ ಮೂಲಕ ಗಾಳಿಯು ಒತ್ತಡವನ್ನುಂಟುಮಾಡುತ್ತದೆ ಎಂಬುದನ್ನು ಪ್ರಾಯೊಗಿಕವಾಗಿ ತೋರಿಸುವುದು.<br>ಚಟುವಟಿಕೆ 1<br><br>ಚಿತ್ರದಲ್ಲಿ ತೋರಿಸಿರುವಂತೆ ಒಂದು ಗಾಜಿನ ಲೋಟವನ್ನು ತೆಗೆದುಕೊಂಡು ಮುಕ್ಕಾಲು ಭಾಗ ನೀರನ್ನು ತುಂಬಿ. ಲೋಟದ ಮೇಲೆ ಆಹ್ವಾನ ಪತ್ರಿಕೆಯ ಹಾಳೆಯನ್ನು ಅದರ ಮೇಲೆ ಮುಚ್ಚಿ. ಲೋಟವನ್ನು ತಲೆಕೆಳಗು ಮಾಡಿ. ಮಕ್ಕಳ ವೀಕ್ಷಣೆ/ಅನುಭವವನ್ನು ವಿವರಿಸಲು ತಿಳಿಸಿ. ನಂತರ ಹಾಳೆಯು ಬೀಳದಿರಲು ಕಾರಣವನ್ನು ಮಕ್ಕಳೇ ಯೋಚಿಸಲು ಪ್ರೇರೇಪಿಸಿ. | 7 ನೇ ತರಗತಿಯ ವಿಜ್ಞಾನ ಅಭ್ಯಾಸ ಪುಸ್ತಕದ ಪುಟಸಂಖ್ಯೆ 41 ರಿಂದ 42 ರವರೆಗಿನ ಚಟುವಟಿಕೆಗಳನ್ನು ನಿರ್ವಹಿಸಲು ಸೂಚಿಸಿ. |

| | | | | |
|---|---|---|---|---|
| | | | ಚಟುವಟಿಕೆ 2<br> <br>ಮೇಲಿನ ಚಿತ್ರದಲ್ಲಿ ತೋರಿಸಿರುವಂತೆ ಖಾಲಿ ಬಾಟಲ್ ಅನ್ನು ತೆಗೆದುಕೊಂಡು ಅದರಲ್ಲಿರುವ ಗಾಳಿಯನ್ನು ನಿಮ್ಮ ಬಾಯಿಯ ಸಹಾಯದಿಂದ ಹೊರತೆಗೆಯಿರಿ. ಬಾಟಲ್‌ನಲ್ಲಿ ಆದ ಬದಲಾವಣೆಯನ್ನು ಗಮನಿಸಿ. ಏಕೆ ಹೀಗೆ ಯೋಚಿಸಲು ಅವಕಾಶ ನೀಡಿ. ಈ ಪ್ರಯೋಗಗಳ ಅನುಭವದ ಮೂಲಕ ಗಾಳಿಗೆ ಒತ್ತಡವಿದೆ ಎಂದು ಮನನ ಮಾಡಿಸಿ.<br>ನಂತರ ಚಟುವಟಿಕೆ ಹಾಳೆ 1 ಅನ್ನು ನಿರ್ವಹಿಸಲು ಸೂಚಿಸಿ. | |

| | | | | |
|---|---|---|---|---|
| | | ವೇಗವಾಗಿ ಬೀಸುವ ಮಾರುತಗಳು ಕಡಿಮೆ ಒತ್ತಡದ ಗಾಳಿಯನ್ನು ಒಳಗೊಂಡಿರುತ್ತದೆ. | 7 ನೇ ತರಗತಿ ವಿಜ್ಞಾನ ಪಠ್ಯಪುಸ್ತಕದಲ್ಲಿನ ಚಟುವಟಿಕೆ 8.2, 8.3 ಮತ್ತು 8.4 ಚಟುವಟಿಕೆಗಳನ್ನು ಮಕ್ಕಳೇ ಮಾಡಲು ಪ್ರೇರೇಪಿಸಿ ಅವರು ಪಡೆದ ಅನುಭವದ ಚರ್ಚೆಯ ಹಿನ್ನೆಲೆಯಲ್ಲಿ ವೇಗವಾಗಿ ಬೀಸುವ ಮಾರುತಗಳು ಕಡಿಮೆ ಒತ್ತಡದ ಗಾಳಿಯನ್ನು ಒಳಗೊಂಡಿರುತ್ತದೆ ಎಂಬುದನ್ನು ಅರ್ಥಮಾಡಿಸಿ. ಚಟುವಟಿಕೆ ಹಾಳೆ 2 ಅನ್ನು ನಿರ್ವಹಿಸಲು ತಿಳಿಸಿ.<br>https://www.youtube.com/watch?v=dE16p3oPcH8<br>ಮೇಲಿನ ವಿಡಿಯೋವನ್ನು ವೀಕ್ಷಿಸಲು ನೆರವಾಗಿ. | 7 ನೇ ತರಗತಿಯ ವಿಜ್ಞಾನ ಅಭ್ಯಾಸ ಪುಸ್ತಕದ ಪುಟಸಂಖ್ಯೆ 43ರ ಚಟುವಟಿಕೆಗಳನ್ನು ನಿರ್ವಹಿಸಲು ಸೂಚಿಸಿ. |
| | ನವೆಂಬರ್ ಎರಡನೇ ವಾರ<br>ಘಟಕ: ಮಾರುತಗಳು, ಬಿರುಗಾಳಿ ಮತ್ತು ಚಂಡಮಾರುತಗಳು | ಮಾರುತಗಳು, ಬಿರುಗಾಳಿ ಮತ್ತು ಚಂಡಮಾರುತಗಳು ಉಂಟಾಗುವುದನ್ನು ಮಕ್ಕಳು ಅರ್ಥಮಾಡಿಕೊಳ್ಳುವರು ಮತ್ತು ಅವುಗಳಿಂದ ರಕ್ಷಿಸಿಕೊಳ್ಳಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳನ್ನು ಅರಿಯುವರು. | https://www.youtube.com/watch?v=-4IlzSu2gvQ<br>https://www.youtube.com/watch?v=oUqixenRXtQ<br>ಮೇಲಿನ ವಿಡಿಯೋ ಲಿಂಕ್‌ಗಳನ್ನು ಮಕ್ಕಳಿಗೆ ಕಳುಹಿಸಿ ಅವರು ವೀಕ್ಷಿಸಲು ಪ್ರೇರೇಪಿಸಿ ಮಾರುತಗಳು, ಬಿರುಗಾಳಿ ಮತ್ತು ಚಂಡಮಾರುತಗಳು ಉಂಟಾಗುವುದನ್ನು ಮಕ್ಕಳು ಅರ್ಥಮಾಡಿಕೊಳ್ಳಲು ಸಹಕರಿಸಿ. | |

| | | | | |
|---|---|---|---|---|
| | ಘಟಕ:<br>ಮಣ್ಣು | ಮಣ್ಣಿನ ಸ್ತರ ವಿನ್ಯಾಸವನ್ನು ತಿಳಿಯುವರು. | ಮಣ್ಣಿನ ಕೆಲವು ಮಾದರಿಗಳನ್ನು ಸಂಗ್ರಹಿಸಿ ಮತ್ತು ಅವುಗಳನ್ನು ಕೈ ಮಸೂರ ಬಳಸಿ ಎಚ್ಚರಿಕೆಯಿಂದ ಗಮನಿಸಿ, ಚಟುವಟಿಕೆ ಹಾಳೆ 5ರಲ್ಲಿನ ಕೋಷ್ಟಕವನ್ನು ತುಂಬಲು ನೆರವಾಗಿ. ಪಠ್ಯಪುಸ್ತಕದ ಚಟುವಟಿಕೆ 9.2ನ್ನು ನಿರ್ವಹಿಸಲು ಅನುಕೂಲಿಸಿ,ಮಣ್ಣಿನ ಸ್ತರ ವಿನ್ಯಾಸದ ಚಿತ್ರಣವನ್ನು ಮಕ್ಕಳು ಗಮನಿಸಲು ನೆರವಾಗಿ. ನಂತರ ಚಟುವಟಿಕಾ ಹಾಳೆ 6ನ್ನು ಪೂರ್ಣಗೊಳಿಸಲು ಸಹಕರಿಸಿ. | 7 ನೇ ತರಗತಿಯ ವಿಜ್ಞಾನ ಅಭ್ಯಾಸ ಪುಸ್ತಕದ ಪುಟಸಂಖ್ಯೆ 44 ರಿಂದ 47 ರವರೆಗಿನ ಚಟುವಟಿಕೆಗಳನ್ನು ನಿರ್ವಹಿಸಲು ಸೂಚಿ |
| | ನವೆಂಬರ್ ಮೂರನೇ ವಾರ<br><br>ಘಟಕ: ಮಣ್ಣು | ಮಣ್ಣಿನ ವಿಧಗಳು ಮತ್ತು ಅವುಗಳಲ್ಲಿ ಬೆಳೆಯುವ ಬೆಳೆಗಳನ್ನು ಪಟ್ಟಿಮಾಡುವರು. | https://www.youtube.com/watch?v=BATKysgZW_4<br>ಮೇಲಿನ ವಿಡಿಯೋ ಲಿಂಕ್‌ಅನ್ನು ಮಕ್ಕಳಿಗೆ ಕಳುಹಿಸಿ ವೀಕ್ಷಿಸಿ, ಮಣ್ಣಿನ ವಿಧಗಳು ಮತ್ತು ಅವುಗಳಲ್ಲಿ ಬೆಳೆಯುವ ಬೆಳೆಗಳನ್ನು ಅರ್ಥಮಾಡಿಕೊಳ್ಳಲು ಪ್ರೇರೇಪಿಸಿ. ನಂತರ ಚಟುವಟಿಕೆ ಹಾಳೆ 7 ಅನ್ನು ನಿರ್ವಹಿಸಲು ನೆರವಾಗಿ. | |
| | ಘಟಕ;<br>ಜೀವಿಗಳಲ್ಲಿ ಉಸಿರಾಟ | ಮಾನವನ ಉಸಿರಾಟ ಕ್ರಮವನ್ನು ಅರ್ಥಮಾಡಿಕೊಳ್ಳುವರು. | ಮಕ್ಕಳು ತಾವು ದಿನನಿತ್ಯ ಮಾಡುವ ಕೆಲಸಗಳಲ್ಲಿ ಉಸಿರಾಟದ ಕ್ರಿಯೆ ಹೇಗಿರುತ್ತದೆ ಎಂಬುದನ್ನು ಕಂಡುಕೊಂಡು ಚಟುವಟಿಕೆ ಹಾಳೆ 8 ರಲ್ಲಿ ಉಸಿರಾಟದ ದರ ಅತಿ ನಿಧಾನ, ನಿಧಾನ, ಸಾಮಾನ್ಯ ಉಸಿರಾಟ ಮತ್ತು ವೇಗದ ಉಸಿರಾಟವೇ ಎಂದು ನಿರ್ಧರಿಸಿ ಕೋಷ್ಟಕವನ್ನು ಭರ್ತಿಮಾಡಲು ಸೂಚಿಸಿ.<br>ಅದೇ ಚಟುವಟಿಕೆ ಹಾಳೆಯಲ್ಲಿ ಬೇರೆ ಬೇರೆ ಪರಿಸ್ಥಿತಿಗಳಲ್ಲಿ ಶ್ವಾಸಕ್ರಿಯೆಯ ದರಗಳಲ್ಲಿನ ಬದಲಾವಣೆಯನ್ನು ದಾಖಲಿಸಲು ಸೂಚಿಸಿ. | ವಿಜ್ಞಾನ ಅಭ್ಯಾಸ ಪುಸ್ತಕದ ಪುಟಸಂಖ್ಯೆ 1 ರಿಂದ 4 ರವರೆಗಿನ ಚಟುವಟಿಕೆಗಳನ್ನು ನಿರ್ವಹಿಸಲು ನೆರವಾಗಿ |

| | | | | |
|---|---|---|---|---|
| | ನವೆಂಬರ್ ನಾಲ್ಕನೇ ವಾರ ಘಟಕ: ಜೀವಿಗಳಲ್ಲಿ ಉಸಿರಾಟ | ಮಾನವರಲ್ಲಿ ಶ್ವಾಸಕ್ರಿಯೆಯ ಕಾರ್ಯವಿಧಾನವನ್ನು ಮನನ ಮಾಡಿಕೊಳ್ಳುವರು. | https://www.youtube.com/watch?v=qYud4j_jTRE ಮೇಲಿನ ವಿಡಿಯೋದ ಸಹಾಯದಿಂದ ಮಾನವನ ಶ್ವಾಸಾಂಗ ವ್ಯೂಹದ ಅಂಗಗಳು ಮತ್ತು ಕಾರ್ಯವಿಧಾನಗಳನ್ನು ವೀಕ್ಷಿಸಲು ತಿಳಿಸಿ ಚಟುವಟಿಕೆ ಹಾಳೆ 9 ಅನ್ನು ನಿರ್ವಹಿಸಲು ತಿಳಿಸಿ. | ವಿಜ್ಞಾನ ಅಭ್ಯಾಸ ಪುಸ್ತಕದ ಪುಟಸಂಖ್ಯೆ 5 ರಿಂದ 7 ರವರೆಗಿನ ಚಟುವಟಿಕೆಗಳನ್ನು ನಿರ್ವಹಿಸಲು ನೆರವಾಗಿ |
| | | ಬೇರೆ ಬೇರೆ ಪ್ರಾಣಿಗಳ ಶ್ವಾಸಕ್ರಿಯೆಯನ್ನು ಅರ್ಥಮಾಡಿಕೊಳ್ಳುವರು | https://www.youtube.com/watch?v=bwiE1110Mfo ಮೇಲಿನ ವಿಡಿಯೋವನ್ನು ವೀಕ್ಷಿಸಿದ ನಂತರ ಬೇರೆ ಬೇರೆ ಜೀವಿಗಳಲ್ಲಿ ಶ್ವಾಸಾಂಗ ಕ್ರಿಯೆ ಹೇಗೆ ನಡೆಯುತ್ತದೆ ಎಂದು ತಿಳಿದು ಚಟುವಟಿಕೆಯ ಹಾಳೆ 10 ಅನ್ನು ನಿರ್ವಹಿಸಲು ತಿಳಿಸಿ. | |

# ಪರ್ಯಾಯ ಶೈಕ್ಷಣಿಕ ಯೋಜನೆ ನವೆಂಬರ್ 2021 – 22

## ಚಟುವಟಿಕೆ ಹಾಳೆ – 1

7 ನೇ ತರಗತಿ ಮಾರುತಗಳು,ಬಿರುಗಾಳಿ ಮತ್ತು ಚಂಡಮಾರುತಗಳು ವಿಷಯ:ವಿಜ್ಞಾನ



ಚಿತ್ರದಲ್ಲಿ ತೋರಿಸಿರುವಂತೆ ಒಂದು ಗಾಜಿನ ಲೋಟವನ್ನು ತೆಗೆದುಕೊಂಡು ಮುಕ್ಕಾಲು ಭಾಗ ನೀರನ್ನು ತುಂಬಿ. ಲೋಟದ ಮೇಲೆ ಆಹ್ವಾನ ಪತ್ರಿಕೆಯ ಹಾಳೆ ಅನ್ನು ಅದರ ಮೇಲೆ ಮುಚ್ಚಿ. ಲೋಟವನ್ನು ತಲೆಕೆಳಗು ಮಾಡಿ. ಮಕ್ಕಳ ವೀಕ್ಷಣೆಯನ್ನು ವಿವರಿಸಲು ತಿಳಿಸಿ. ನಂತರ ಹಾಳೆ ಬೀಳದಿರಲು ಕಾರಣವನ್ನು ಯೋಚಿಸಿ ವಿವರಿಸಿ.

______________________________________________
______________________________________________
______________________________________________
______________________________________________



ಮೇಲಿನ ಚಿತ್ರದಲ್ಲಿ ತೋರಿಸಿರುವಂತೆ ಖಾಲಿ ಬಾಟಲ್ ಅನ್ನು ತೆಗೆದುಕೊಂಡು ಅದರಲ್ಲಿರುವ ಗಾಳಿಯನ್ನು ನಿಮ್ಮ ಬಾಯಿಯ ಸಹಾಯದಿಂದ ಹೊರತೆಗೆಯಿರಿ. ಬಾಟಲ್‌ನಲ್ಲಿ ಆದ ಬದಲಾವಣೆಯನ್ನು ಸೂಕ್ತ ಕಾರಣಗಳೊಂದಿಗೆ ವಿವರಿಸಿ.

______________________________________________
______________________________________________
______________________________________________
______________________________________________

**ಪರ್ಯಾಯ ಶೈಕ್ಷಣಿಕ ಯೋಜನೆ ನವೆಂಬರ್ 2021 – 22**

ಚಟುವಟಿಕೆ ಹಾಳೆ – 2

7 ನೇ ತರಗತಿ ಮಾರುತಗಳು, ಬಿರುಗಾಳಿ ಮತ್ತು ಚಂಡಮಾರುತಗಳು ವಿಷಯ: ವಿಜ್ಞಾನ

ನಿಮ್ಮ ವಿಜ್ಞಾನ ಪಠ್ಯಪುಸ್ತಕದಲ್ಲಿನ ಚಟುವಟಿಕೆ 8.2, 8.3 ಮತ್ತು 8.4 ಚಟುವಟಿಕೆಗಳನ್ನು ಹಿರಿಯರ ಅಥವಾ ಶಿಕ್ಷಕರ ನೆರವಿನೊಂದಿಗೆ ನಿರ್ವಹಿಸಿ ನೀವು ಪಡೆದ ಅನುಭವದ ಹಿನ್ನೆಲೆಯಲ್ಲಿ ಶಿಕ್ಷಕರೊಂದಿಗೆ ಚರ್ಚಿಸಿ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಬಾಟಲಿನ ಬಾಯಿಯ ಒಳಭಾಗದಲ್ಲಿದ್ದ ಕಾಗದದ ಉಂಡೆ ಬಾಟಲಿನ ಒಳಗೆ ಹೋಗುತ್ತದೆ ಎಂದು ಭಾವಿಸಿದ್ದೀರ ಅಲ್ಲವೇ? ಆದರೆ ಕಾಗದದ ಉಂಡೆ ಹೊರಬರಲು ಕಾರಣವೇನು?

   ---------------------------------------------------------------

   ---------------------------------------------------------------

   ---------------------------------------------------------------

   ---------------------------------------------------------------

2. ಎರಡು ಬಲೂನುಗಳ ಮಧ್ಯೆ ಗಾಳಿಯನ್ನು ಊದಿದಾಗ ಬಲೂನು ಸಹಜವಾಗಿ ದೂರ ಹೋಗುತ್ತದೆ ಎಂದು ಅಂದುಕೊಂಡೆವಲ್ಲಾ! ಆದರೆ ಆಗಿದ್ದೇನು? ಏಕೆ?

   ___________________________________________

   ___________________________________________

   ___________________________________________

   ___________________________________________

3. ಮೂರನೇ ಚಟುವಟಿಕೆಯಲ್ಲಿ ಕಾಗದದ ಪಟ್ಟಿ ಮೇಲೇರಲು ಕಾರಣವೇನು?

   ---------------------------------------------------------------

   ---------------------------------------------------------------

   ---------------------------------------------------------------

   ---------------------------------------------------------------



**ಪರ್ಯಾಯ ಶೈಕ್ಷಣಿಕ ಯೋಜನೆ ನವೆಂಬರ್ 2021 – 22**

ಚಟುವಟಿಕೆ ಹಾಳೆ – 3

7 ನೇ ತರಗತಿ ಮಾರುತಗಳು, ಬಿರುಗಾಳಿ ಮತ್ತು ಚಂಡಮಾರುತಗಳು ವಿಷಯ: ವಿಜ್ಞಾನ

https://www.youtube.com/watch?v=-4lIzSu2gvQ

https://www.youtube.com/watch?v=oUqixenRXtQ

ಮೇಲಿನ ವಿಡಿಯೋಗಳನ್ನು ವೀಕ್ಷಣೆ ಮಾಡಿ ಕೆಳಗಿನ ಚಟುವಟಿಕೆಗಳನ್ನು ನಿರ್ವಹಿಸಿ.

ಸೂಕ್ತವಾದ ಉತ್ತರಗಳನ್ನು ಆರಿಸಿ ಬರೆಯಿರಿ.

1. ಭೂಮಿಯ ಮೇಲೆ ಮಾರುತಗಳ ಪ್ರವಾಹ ಉಂಟಾಗಲು ಕಾರಣ
   ಅ. ಭೂಮಧ್ಯರೇಖೆ ಮತ್ತು ದೃವಗಳ ನಡುವಿನ ಅಸಮಾನ ಉಷ್ಣತೆ
   ಆ. ಭೂಮಿಯ ಮತ್ತು ನೀರಿನ ನಡುವಿನ ಅಸಮಾನ ಉಷ್ಣತೆ
   ಇ. ಭೂಮಧ್ಯ ರೇಖೆ ಮತ್ತು ದಕ್ಷಿಣ ದೃವಗಳ ನಡುವಿನ ಅಸಮಾನ ಉಷ್ಣತೆ
   ಈ. ನೆಲ ಹಾಗೂ ಕಾಡುಗಳ ನಡುವಿನ ಅಸಮಾನ ಉಷ್ಣತೆ

2. ಚಳಿಗಾಲದಲ್ಲಿ ಮಾರುತಗಳು ಬೀಸುವ ದಿಕ್ಕು

   ಅ. ಸಾಗರದಿಂದ ಭೂಮಿಯ ಕಡೆಗೆ

   ಆ. ದೃವ ಪ್ರದೇಶದಿಂದ ಭೂಮಧ್ಯ ರೇಖೆಯ ಕಡೆಗೆ

   ಇ. ಭೂಮಿಯಿಂದ ಸಾಗರದ ಕಡೆಗೆ.

   ಈ. ಕರಾವಳಿ ಪ್ರದೇಶದಿಂದ ಭೂಮಧ್ಯೆ ರೇಖೆಯ ಕಡೆಗೆ

3. ಚಂಡಮಾರುತಗಳು ಉಂಟಾಗಲು ಕಾರಣ

   ಅ. ಅತಿವೇಗದ ಮಾರುತಗಳು ಆ. ಕಾಡಿನ ನಾಶ

   ಇ. ಮಳೆ ಸುರಿಯುವಿಕೆ ಈ. ಗಾಳಿಯ ಒತ್ತಡದಲ್ಲಿನ ವ್ಯತ್ಯಾಸ.

4. ವಾತಾಯನ ಕಿಂಡಿಗಳಿಲ್ಲದೆ ಕಿಟಕಿಗಳು ಮಾತ್ರ ಇರುವ ಮನೆಯಲ್ಲಿ ನೀವು ವಾಸಿಸಲು ಇಚ್ಛಿಸುವಿರಾ? ನಿಮ್ಮ ಉತ್ತರವನ್ನು ವಿವರಿಸಿ.

**ಪರ್ಯಾಯ ಶೈಕ್ಷಣಿಕ ಯೋಜನೆ ನವೆಂಬರ್ 2021 – 22**

ಚಟುವಟಿಕೆ ಹಾಳೆ – 4

7 ನೇ ತರಗತಿ ಮಾರುತಗಳು, ಬಿರುಗಾಳಿ ಮತ್ತು ಚಂಡಮಾರುತಗಳು ವಿಷಯು: ವಿಜ್ಞಾನ

ನಿಮ್ಮ ಹಿರಿಯರನ್ನು ಸಂದರ್ಶಿಸಿ ಬಿರುಗಾಳಿಯೊಂದಿಗೆ ಮಿಂಚು ಗುಡುಗು ಉಂಟಾಗುವ ಸಂದರ್ಭದಲ್ಲಿ ನೀವು ಯಾವ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಮಾಹಿತಿ ಸಂಗ್ರಹಿಸಿ.

ನಿಮ್ಮ ವಿಜ್ಞಾನ ಪಠ್ಯಪುಸ್ತಕದ ಪುಟ ಸಂಖ್ಯೆ 125 ರಲ್ಲಿರುವ ವಾಯುವೇಗ ಮಾಪಕದ ಮಾದರಿಯನ್ನು ತಯಾರಿಸಿ. ನಿಮ್ಮ ಊರಿನಲ್ಲಿ ಗಾಳಿ ಬೀಸುವ ದಿಕ್ಕನ್ನು ವಾಯುವೇಗ ಮಾಪಕದ ಸಹಾಯದಿಂದ ಕಂಡುಹಿಡಿಯಿರಿ ಮತ್ತು ದಿಕ್ಕನ್ನು ನಮೂಧಿಸಿ..

## ಪರ್ಯಾಯ ಶೈಕ್ಷಣಿಕ ಯೋಜನೆ 2021 – 22

### ಚಟುವಟಿಕೆ ಹಾಳೆ – 5

7 ನೇ ತರಗತಿ ಘಟಕ: ಮಣ್ಣು ವಿಷಯ: ವಿಜ್ಞಾನ

ಪ್ರಿಯ ಮಗೂ, ಮಣ್ಣಿನ ಕೆಲವು ಮಾದರಿಗಳನ್ನು ಸಂಗ್ರಹಿಸು ಮತ್ತು ಕೈ ಮಸೂರ ಬಳಸಿ ಸೂಕ್ಷವಾಗಿ ಅವುಗಳನ್ನು ಗಮನಿಸಿ, ಕೋಷ್ಟಕವನ್ನು ತುಂಬು.

| ಕ್ರ.ಸಂ | ಮಣ್ಣಿನ ಆಕರ | ಸಸ್ಯಗಳು | ಪ್ರಾಣಿಗಳು | ಗಮನಿಸಿದ ಇತರೆ ಅಂಶಗಳು |
|---|---|---|---|---|
| 1 | ತೋಟದ ಮಣ್ಣು | ಹುಲ್ಲು... | ಇರುವೆ... | |
| 2 | ರಸ್ತೆಬದಿಯ ಮಣ್ಣು | | | |
| 3 | ಕಟ್ಟಡ ನಿರ್ಮಾಣ ಕಾರ್ಯ ನಡೆಯುತ್ತಿರುವ ಪ್ರದೇಶದ ಮಣ್ಣು | | | |
| 4 | | | | |
| 5 | | | | |
| 6 | | | | |
| 7 | | | | |
| 8 | | | | |
| 9 | | | | |

**ಪರ್ಯಾಯ ಶೈಕ್ಷಣಿಕ ಯೋಜನೆ 2021 – 22**

ಚಟುವಟಿಕೆ ಹಾಳೆ – 6

7ನೇ ತರಗತಿ ಘಟಕ: ಮಣ್ಣು ವಿಷಯ: ವಿಜ್ಞಾನ

ಕೆಳಗಿನ ಚಿತ್ರದಲ್ಲಿ ಮಣ್ಣಿನ ವಿವಿಧ ಪದರಗಳನ್ನು ಗುರುತಿಸಿ.



ಕೆಳಗಿನ ಚಿತ್ರದಲ್ಲಿ ಮಣ್ಣಿನ ವಿವಿಧ ಸ್ತರಗಳನ್ನು ಗುರುತಿಸಿ.



**ಪರ್ಯಾಯ ಶೈಕ್ಷಣಿಕ ಯೋಜನೆ 2021 – 22**

ಚಟುವಟಿಕೆ ಹಾಳೆ – 7

7 ನೇ ತರಗತಿ ಘಟಕ: ಮಣ್ಣು ವಿಷಯ: ವಿಜ್ಞಾನ

https://www.youtube.com/watch?v=BATKysgZW_4

ಮೇಲಿನ ಲಿಂಕ್‌ನ ಸಹಾಯದಿಂದ ವಿಡಿಯೋವನ್ನು ವೀಕ್ಷಿಸಿ ಕೆಳಗಿನ ಚಟುವಟಿಕೆಗಳನ್ನು ನಿರ್ವಹಿಸಿ.

1. ಮಣ್ಣಿನ ವಿಧಗಳನ್ನು ಪಟ್ಟಿಮಾಡಿ.

____________________________________________

____________________________________________

____________________________________________

____________________________________________

____________________________________________

2. ಕೆಳಗಿನ ಕೋಷ್ಟಕದಲ್ಲಿರುವ ಮಣ್ಣಿನ ವಿಧಗಳಲ್ಲಿ ಬೆಳೆಯುವ ಬೆಳೆಗಳನ್ನು ಪಟ್ಟಿಮಾಡಿ.

| ಕ್ರ. ಸಂ | ಮಣ್ಣಿನ ವಿಧಗಳು | ಬೆಳೆಯುವ ಬೆಳೆಗಳು |
|---|---|---|
| 1. | ಕೆಂಪು ಮಣ್ಣು | |
| 2. | ಜೇಡಿಯುಕ್ತ ಮಣ್ಣು | |
| 3. | ಕಪ್ಪು ಮಣ್ಣು | |
| 4. | ಮರಳು ಮಿಶ್ರಿತ ಕೆಂಪು ಮಣ್ಣು | |
| 5. | ಮೆಕ್ಕಲು ಮಣ್ಣು | |
| 6. | ಲ್ಯಾಟರಾಯ್ಟ್ ಮಣ್ಣು | |
| 7. | ಮರಳು ಮಣ್ಣು | |

## ಪರ್ಯಾಯ ಶೈಕ್ಷಣಿಕ ಯೋಜನೆ 2021 – 22

### ಚಟುವಟಿಕೆ ಹಾಳೆ – 8

7 ನೇ ತರಗತಿ ಘಟಕ: ಜೀವಿಗಳಲ್ಲಿ ಉಸಿರಾಟ ವಿಷಯ: ವಿಜ್ಞಾನ

ಕೆಳಗಿನ ಚಟುವಟಿಕೆಗಳನ್ನು ಮಾಡುವಾಗ ನಮ್ಮ ಉಸಿರಾಟದ ದರವನ್ನು ಗುರುತಿಸಿ.

| ಕ್ರಮಸಂಖ್ಯೆ | ನಿರ್ವಹಿಸುವ ಚಟುವಟಿಕೆಗಳು | ಅತಿ ನಿಧಾನ/ನಿಧಾನ/ಸಾಮಾನ್ಯ/ವೇಗ |
|---|---|---|
| 1. | ಬಟ್ಟೆ ಹೊಗೆಯುವುದು | |
| 2. | ನಿದ್ದೆ | |
| 3. | ಓದುವುದು. | |
| 4. | ನಡೆಯುವುದು | |
| 5. | ನೃತ್ಯ | |
| 6. | ಮೆಟ್ಟಿಲು ಹತ್ತುವುದು. | |
| 7. | ಓಡುವುದು | |
| 8. | ಮಾತನಾಡುವುದು | |
| 9. | ಉದ್ವೇಗದಿಂದ ಮಾತನಾಡಿದಾಗ | |
| 10 | ಊಟ ಮಾಡುವಾಗ | |
| | | |

ಬೇರೆ ಬೇರೆ ಪರಿಸ್ಥಿತಿಗಳಲ್ಲಿ ನಿನ್ನ ಸ್ನೇಹಿತರ ಶ್ವಾಸಕ್ರಿಯೆಯ ದರದಲ್ಲಿನ ಬದಲಾವಣೆಯನ್ನು ಕೆಳಗಿನ ಕೋಷ್ಟಕದಲ್ಲಿ ದಾಖಲಿಸಿ.

| ಸಹಪಾಠಿಯ ಹೆಸರು | ಶ್ವಾಸಕ್ರಿಯೆಯ ದರ | | | |
|---|---|---|---|---|
| | ಸಾಮಾನ್ಯ ಸ್ಥಿತಿ | 10 ನಿಮಿಷಗಳ ತೀವ್ರ ಗತಿಯ ನಡಿಗೆಯ ನಂತರ | 100 ಮೀ ವೇಗದ ಓಟದ ನಂತರ | ವಿಶ್ರಾಂತ ಸ್ಥಿತಿಯಲ್ಲಿ |
| | | | | |
| | | | | |
| | | | | |
| | | | | |
| | | | | |
| | | | | |

## ಪರ್ಯಾಯ ಶೈಕ್ಷಣಿಕ ಯೋಜನೆ 2021 – 22

### ಚಟುವಟಿಕೆ ಹಾಳೆ – 9

7 ನೇ ತರಗತಿ ವಿಷಯ: ವಿಜ್ಞಾನ

### ಜೀವಿಗಳಲ್ಲಿ ಉಸಿರಾಟ

https://www.youtube.com/watch?v=qYud4j_jTRE

ಮೇಲಿನ ವಿಡಿಯೋವನ್ನು ವೀಕ್ಷಿಸಿ ಕೆಳಗಿನ ಚಟುವಟಿಕೆಗಳನ್ನು ನಿರ್ವಹಿಸಿ.

1. ಮಾನವನ ಶ್ವಾಸಾಂಗ ವ್ಯೂಹದ ಚಿತ್ರ ಬರೆದು, ಭಾಗಗಳನ್ನು ಗುರುತಿಸಿ.

2. ನಿಮ್ಮ ವಿಜ್ಞಾನ ಪಠ್ಯಪುಸ್ತಕದ ಚಟುವಟಿಕೆ 10.5 ರಲ್ಲಿರುವ ಶ್ವಾಸಕ್ರಿಯೆಯ ಕಾರ್ಯವಿಧಾನವನ್ನು ತೋರಿಸುವ ಮಾದರಿಯನ್ನು ಹಿರಿಯರ ಸಹಾಯದಿಂದ ಮಾಡಿ ತರಗತಿಯಲ್ಲಿ ಪ್ರದರ್ಶಿಸಿ.
3. ಮಾನವನ ಶ್ವಾಸಕ್ರಿಯೆಯನ್ನು ವಿವರಿಸಿ.

**ಪರ್ಯಾಯ ಶೈಕ್ಷಣಿಕ ಯೋಜನೆ 2021 – 22**

ಚಟುವಟಿಕೆ ಹಾಳೆ – 10

7 ನೇ ತರಗತಿ ಘಟಕ: ಜೀವಿಗಳಲ್ಲಿ ಉಸಿರಾಟ ವಿಷಯ: ವಿಜ್ಞಾನ

https://www.youtube.com/watch?v=bwiE11l0Mfo

ಮೇಲಿನ ವಿಡಿಯೋವನ್ನು ವೀಕ್ಷಿಸಿದ ನಂತರ ಬೇರೆ ಬೇರೆ ಜೀವಿಗಳಲ್ಲಿ ಶ್ವಾಸಾಂಗ ಕ್ರಿಯೆ ಹೇಗೆ ನಡೆಯುತ್ತದೆ ಎಂದು ತಿಳಿದು ಕೆಳಗಿನ ಚಟುವಟಿಕೆಯನ್ನು ನಿರ್ವಹಿಸಿ.

ಕೆಳಗಿನ ಜೀವಿಗಳನ್ನು ಅವುಗಳ ಉಸಿರಾಟದ ಅಂಗಗಳೊಂದಿಗೆ ಹೊಂದಿಸಿ.

| ಜೀವಿಗಳು | ಉಸಿರಾಟದ ಅಂಗಗಳು |
|---|---|
| 1. ಕಪ್ಪೆ | ಕಿವಿರುಗಳು |
| 2. ಎರೆಹುಳು | ಪತ್ರರಂಧ್ರಗಳು |
| 3. ಮಾನವ | ಶ್ವಾಸನಾಳ |
| 4. ಮೀನು | ಒದ್ದೆಚರ್ಮ ಮತ್ತು ಶ್ವಾಸಕೋಶ |
| 5. ಕೀಟಗಳು | ಶ್ವಾಸಕೋಶ |
| 6. ಸಸ್ಯಗಳು | ಒದ್ದೆಚರ್ಮ |

ಮೀನಿನ ಶ್ವಾಸಕ್ರಿಯೆಯ ಅಂಗಗಳನ್ನು ತೋರಿಸುವ ಚಿತ್ರವನ್ನು ಬರೆದು ಭಾಗಗಳನ್ನು ಗುರುತಿಸಿ.